

ಮಾಡುತ್ತಾನಾದರೂ ಮಕ್ಕಳ ಸ್ಕೂಲ್ ಫೀನಿಂದ ಹಿಡಿದು ಹಾಲು, ಹಣ್ಣು ಎಲ್ಲಾ ಖರ್ಚು ಇವರ ಹಣದಿಂದಲೇ ಆಗಬೇಕು. ಎರಡು ಅಂತಸ್ತು ಮನೆ ಕಟ್ಟಿಸಿದ್ದು ಸಹ ಇವರ ಆದಾಯದಿಂದಲೇ. ಇಬ್ಬರು ಹೆಣ್ಣುಮಕ್ಕಳ ವಿವಾಹ ಮಾಡಿದ್ದಾರೆ. ಎಲ್ಲರೂ ಸುಖವಾಗಿ ಸೆಟ್ಲ್ ಆಗಿದ್ದಾರೆ. ದೊಡ್ಡ ಅಳಿಯ ಬರೋಡಾದಲ್ಲಿದ್ದರೆ, ಚಿಕ್ಕವನು ದಿಲ್ಲಿಯಲ್ಲಿ. ಚಂದ್ರು ಮಾತ್ರ ದಾರಿಗೆ ಬರಲಿಲ್ಲ. ಒಂದು ಚಿಕ್ಕ ಸ್ಟೇಷನರಿ ಅಂಗಡಿ ನಡೆಸುತ್ತಿದ್ದಾನೆ. ಚಂದ್ರುನ ತಾಯಿ ಇದ್ದಾಗ ಮನೆಯಲ್ಲಿ ಒಂದು ವ್ಯವಸ್ಥೆ ಇತ್ತು. ಆಕೆ ಸತ್ತ ನಂತರ ಇವರ ಮನಸ್ಸಿನಲ್ಲಿ ಯಾವಾಗಲೂ ಬೇಸರ ತುಂಬಿರುತ್ತದೆ. ಮನದ ದುಗುಡವನ್ನು ಯಾರೊಂದಿಗೆ ಹೇಳಿಕೊಳ್ಳುವುದು? ಮಕ್ಕಳು ಮರಿಗಳ ಪ್ರೀತಿ ಮೋಹ ಇದ್ದೇ ಇರುತ್ತದೆ. ಆದರೆ...

ಬೆಳಗಿನ ವಾಕಿಂಗ್ ಮುಗಿಸಿ ಬಂದು ಕೈಕಾಲು ತೊಳೆದುಕೊಂಡರು. ಪ್ರಾಣಾಯಾಮ ಮಾಡಿದರು. ಸೊಸೆ ಉಪಾಹಾರ ತಂದಿಟ್ಟಳು. ತಿಂಡಿ ತಿಂದು ಟಿ.ವಿ. ನೋಡತೊಡಗಿದರು. ಆಗ ಚಂದ್ರುನ ಹಟದಿಂದಾಗಿ ಪಿಎಫ್ ಹಣದಿಂದ ಟಿ.ವಿ. ಖರೀದಿಸಿದ್ದು ನೆನಪಾಯಿತು. ಆ ಸಮಯದಲ್ಲಿ ರಾಮಾಯಣ–ಮಹಾಭಾರತದ ಧಾರಾವಾಹಿಗಳ ಭರಾಟೆ ಇತ್ತು. ಈಗ ಬೇಸರ ತರಿಸುತ್ತದೆ. ಬರೀ ಗಲಾಟೆ. ಮನೆಯೊಳಗೆ ಚಂದ್ರೂನ ತಾಯಿಯ ಅಭಾವದಿಂದಾಗಿ ಯಾವುದರ ಬಗ್ಗೆಯೂ ಆಸಕ್ತಿ ಇಲ್ಲದಂತಾಗಿದೆ. ಯಾರಾದರೂ ಮನೆಗೆ ಬಂದಾಗ ಅಧಿಕಾರಯುತವಾಗಿ ಚಹಾಕ್ಕೆ ಹೇಳಲೂ ಸಹ ಸಂಕೋಚ ಆಗುತ್ತದೆ. ಪತ್ನಿ ಮಾತ್ರ ಈ ವಿಷಯದಲ್ಲಿ ಬಹಳ ಉದಾರಿ ಆಗಿದ್ದಳು. ಎಂದೂ ಸಹ ಆಕೆ ಬೇಸರಿಸುತ್ತಿರಲಿಲ್ಲ. ಈಗ ಯಾರಾದರೂ ಮನೆಗೆ ಬಂದರೆ ಇವರೇ ಹಿಂದೆ ಮುಂದೆ ನೋಡುತ್ತಾರೆ.

ಓಹ್...! ಕೇದಾರ್‌ಬಾಬು ಬಂದರು. ಕೇದಾರ್‌ಬಾಬು ಇವರ ಆಪ್ತಮಿತ್ರರು. ಇವರಿಬ್ಬರೂ ಅದೆಷ್ಟು ಬಾರಿ ಒಬ್ಬರಿನ್ನೊಬ್ಬರ ಮನೆಗಳಲ್ಲಿ ಊಟ, ತಿಂಡಿ ಮಾಡಿದ್ದಾರೆ. ಅವರು ಎದ್ದು ವರಾಂಡಕ್ಕೆ ಹೋಗಿ ಸ್ವಾಗತಿಸಿದರು.

'...ಬನ್ನಿ.... ಬನ್ನಿ...'

ಕೇದಾರ್‌ಬಾಬು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ಹೇಳಿದರು. 'ನಿಮಗೆ ಒಂದು ಸಮಾಚಾರ ಗೊತ್ತಾ ರಾಮಕಿಂಕರಬಾಬು...! ಒಂದು ಮನೆಯಲ್ಲಿ ಸ್ವತಃ ಮಗನೆ ತನ್ನ ವೃದ್ಧೆ ತಾಯಿಯನ್ನು ಮನೆಯ ಮಹಡಿಯಿಂದ ಕೆಳಕ್ಕೆ ತಳ್ಳಿ ಬಿಟ್ಟನಂತೆ...'

'...ಏನು ಬೇಕಾದ್ರೂ ಆಗುತ್ತೆ' ಕೇದಾರ್‌ಬಾಬು...! ಬೇಸರದಿಂದಲೇ ನುಡಿದರು. '....ಈಗ ನಮ್ಮ ಪ್ರಪಂಚ ಅಂತ ಏನೂ ಇಲ್ಲ. ಯಾರು ಎಲ್ಲಿಂದ ಬೇಕಾದ್ರೂ ತಳ್ಳಿ ಬಿಡಬಹುದು. ನಾವಂತೂ ಈಗಲೇ ಸತ್ತಂತಾಗಿದ್ದೇವೆ. ಯಾರು ಕೇಳ್ತಾರೆ ನಮ್ಮನ್ನು...? ...ಅಂ., ಚಹಾ ತಗೋತೀರೇನು...?'

'... ಬೇಡ ಬಿಡಿ...' ಮತ್ತೆ ಹೇಳಿದರು. '...ನಾವು ಎಂತಹ ಮಕ್ಕಳಿಗೆ ಜನ್ಮ ನೀಡಿದ್ದೇವೆ...?'

'ಹಾಗೇನಿಲ್ಲ...' ರಾಮಕಿಂಕರಬಾಬು ಜೋರಾಗಿ ಹೇಳಿದರು '...ಅರೇ, ಚಿನ್ನು ಮಗೂ ಅಮ್ಮನಿಗೆ ಹೇಳು, ಎರಡು ಕಪ್ ಚಹಾ ಮಾಡೂಂತ....'

ಮಗು ಹೊರಗೆ ಬಂದು ಪುನಃ ಒಳಗೆ ಓಡಿತು.

'ಅಂ, ನೋಡಿ ಈಗ ನಮ್ಮಲ್ಲಿಯೂ ವಯಸ್ಸಾದವರನ್ನು ಹೊರೆ ಎಂದು ಭಾವಿಸಿದ್ದಾರೆ. ಹಿಂದಿನ ರೀತಿಯ ಗೌರವ, ಮರ್ಯಾದೆ ಈಗ ಉಳಿದಿಲ್ಲ. ಆದರೆ ನೀವು ಮಾತ್ರ ಈ ವಿಷಯದಲ್ಲಿ ಪುಣ್ಯವಂತರು. ನಿಮ್ಮ ಚಂದ್ರು ವಿನಯವಂತ. ನನ್ನ ಮಕ್ಕಳು ಮಾತ್ರ ನಾಲಾಯಕ್. ನನಗೆ ಪೆನ್ಷನ್ ಇಲ್ಲದೆ ಹೋಗಿದ್ರೆ ನಾನು ಕೂಡ ಖಂಡಿತವಾಗಲೂ ಬೀದಿಗೆ ಬೀಳ್ತಾ ಇದ್ದೆ...' ಕೇದಾರ್‌ಬಾಬು ಹೇಳಿದರು.

'ಅರೇ., ಚಿನ್ನು... ಚಹಾ...!' ಅವರು ಸೊಸೆಗೆ ಮತ್ತೆ ನೆನಪಿಸಿದರು.

'ಹಾಲು ಒಡೆದು ಹೋಗಿದೆ...' ಚಿನ್ನು ಬಂದು ಹೇಳಿದ.

'ಹಾಗಾದರೆ ಲಿಂಬೆ ಶರಬತ್ತು ಮಾಡಲು ಹೇಳು'.

'ಲಿಂಬೆ ಕೂಡ ಖಾಲಿಯಾಗಿದೆ...' ಒಳಗಿನಿಂದ ಸ್ವರ ತೇಲಿಬಂತು.

ಅವರ ಮನಸ್ಸು ಕಸಿವಿಸಿಗೊಂಡಿತು. ಮಕ್ಕಳ ಬಗ್ಗೆ ಅಲ್ಲ, ಬದಲಾಗಿ ಎಂತಹ ಸ್ವಾರ್ಥ ಆವರಿಸಿಬಿಟ್ಟಿದೆ! ಈಗಿನ ಪೀಳಿಗೆಯ ಸಂಸಾರವನ್ನೇ ಅದು ಕಿತ್ತುಕೊಂಡುಬಿಟ್ಟಿದೆ. ಇವರಿಗೆ ಒಂದೆರಡು ಲೋಟ ಚಹಾ ಮಾಡುವುದು ಸಹ ದೊಡ್ಡ ಕೆಲಸ ಎನಿಸುತ್ತಿದೆ.

ಕೇದಾರ್‌ಬಾಬುಗೆ ಇವರ ದುಗುಡ ಅರ್ಥವಾಯಿತು. ಕೂಡಲೇ ಅವರು 'ಅಂ, ರೈಲ್ವೆ ಗೇಟ್‌ನ ಬಳಿ ಹರಿಬಾಬು ಸಿಕ್ಕಿ, ಚಹ ಮಾಡುತ್ತೇನೆ ಇಲ್ಲೇ ಬನ್ನಿ ಎಂದರು. ಅವರು ಕಾಯುತ್ತಿರುತ್ತಾರೆ. ಅಲ್ಲಿಂದ ನಾವು ದಾಸ್‌ಜೀಯನ್ನು ಭೇಟಿಯಾಗಲು ಹೋಗುತ್ತೇವೆ. ನೀವು ಬರುವುದಾದರೆ ಬನ್ನಿ...' ಎಂದರು.

'ಖಂಡಿತ...' ರಾಮಕಿಂಕರಬಾಬು ಹೇಳಿದರು.